ಮಂಡಳಿಗೂ ನೌಕರಿ ಮಾಡೋವರ ಮಾರಿ ಚಹರಾಕ್ಕೂ ಹೊಂದಿಕಿ ಆಗ್ಬೇಕಂತ. ಹಾಂಗ ಹೊಂದಿಕಿ ಆಗ್ಲಿಲ್ಲಂದ್ರ ನೌಕರಿನಿಂದ ತೆಗೆದು ಹಾಕ್ತಾರಂತ. ಎಷ್ಟ ಸಲ ಬಡ್ಕೊಂಡಿನಿ, ಸಮಯ ಸಂದರ್ಭಕ್ಕ ತಕ್ಕಂಗ ಬದುಕೋದು ರೂಢಿಸಿಕೊಳ್ರಿ ಅಂತ. ಎಲ್ಲಿ ನನ್ನ ಮಾತು ಕಿವ್ಯಾಗ ಹಾಕೊತಿರಿ. ಮದವಿ ಆದಾಗ್ಲಿಂದ ನೋಡ್ಲಿಕತ್ತಿನಿ ಈ ಮುಖದಾಗ ಒಂದಷ್ಟರೆ ಬದಲಾವಣಿ ಆಗ್ಯಾದೇನು. ಅದೇ ಗುಡ್ಡದ ಮ್ಯಾಲ ನಿಂತ ಗೊಮ್ಮಟನಂಗ'. ಹೆಂಡತಿ ಆಡಿದ ಮಾತುಗಳು ನೆನಪಾಗಿ ಪ್ರೇಮಚಂದನ ಆತಂಕ ಮತ್ತಷ್ಟು ಹೆಚ್ಚಿತು.

★★★

ಕಳೆದ ಇಪ್ಪತ್ತೈದು ವರ್ಷಗಳಿಂದ ಬಹುರಾಷ್ಟ್ರೀಯ ಕಂಪನಿಯೊಂದರ ಶಾಖಾ ಕಚೇರಿಯಲ್ಲಿ ಲೆಕ್ಕ ಪರಿಶೋಧಕನಾಗಿ ಕೆಲಸ ಮಾಡುತ್ತಿರುವ ಪ್ರೇಮಚಂದ ಗಲಗಲಿಯದು ಯಾವ ಏರಿಳಿತಗಳಿಲ್ಲದ ಸರಳ ಬದುಕು. ಪತ್ನಿ ಸರಳಾಬಾಯಿ, ಎಂಜಿನಿಯರಿಂಗ್ ಫೈನಲ್ ಸೆಮಿಸ್ಟರ್‌ನಲ್ಲಿ ಓದುತ್ತಿರುವ ಮಗ ವಿಜೇತ, ಎರಡನೆ ಪಿಯುಸಿ ಓದುತ್ತಿರುವ ಮಗಳು ವೀಣಾ ಒಟ್ಟಾರೆ ಚಿಕ್ಕ ಮತ್ತು ಚೊಕ್ಕ ಸಂಸಾರ. ತಲೆಯ ಮೇಲೊಂದು ಸೂರಿದೆ ಎನ್ನುವುದಕ್ಕೆ ಸಾಕ್ಷಿಯಾಗಿ ಮಧ್ಯಮ ವರ್ಗದವರೇ ಹೆಚ್ಚಾಗಿ ವಾಸಿಸುತ್ತಿರುವ ನಗರದ ಬಡಾವಣೆಯೊಂದರಲ್ಲಿ ಅಪ್ಪ ಕಟ್ಟಿಸಿದ ಮನೆಯಿದೆ. ಅಪ್ಪ ಅಮ್ಮ ಇಹಲೋಕ ತ್ಯಜಿಸಿ ಹತ್ತಿರ ಹತ್ತಿರ ಹತ್ತು ವರ್ಷಗಳಾಗುತ್ತ ಬಂತು. ಹೆತ್ತವರ ಸಾವಿನ ಅನಂತರ ಪ್ರೇಮಚಂದನೇ ಸಂಬಂಧಿಕರಿಂದ ದೂರಾದನೋ ಇಲ್ಲ ಅವರೇ ಇವನಿಂದ ದೂರಾದರೋ ಅಂತೂ ಯಾವ ನೆಂಟರಿಷ್ಟರ ರಗಳೆ ತಾಪತ್ರಯಗಳಿಲ್ಲದೆ ತಾನಾಯ್ತು ತನ್ನ ಕೆಲಸವಾಯ್ತು ಎಂದು ಬದುಕುತ್ತಿರುವ ನಿರುಪದ್ರವಿ ಜೀವಿ ಈತ. ಬೆಳಗ್ಗೆ ಐದಕ್ಕೆ ಎದ್ದು ಒಂದಿಷ್ಟು ವಾಕಿಂಗ್ ಮುಗಿಸಿ ಸ್ನಾನ ಸಂಧ್ಯಾವಂದನೆ ಮಾಡಿ ಹೆಂಡತಿ ಮಾಡಿಟ್ಟ ಉಪ್ಪಿಟ್ಟೊ ಅವಲಕ್ಕಿನೊ ತಿಂದು ಎರಡು ಚಪಾತಿಗಳನ್ನು ಡಬ್ಬಿಯಲ್ಲಿ ಸುತ್ತಿಕೊಂಡು ಮನೆಯಿಂದ ಹೊರಬಿದ್ದು ಸಮೀಪದ ಪಿಕಪ್ ಪಾಯಿಂಟ್‌ನಲ್ಲಿ ಕಂಪನಿಯ ಕ್ಯಾಬ್ ಹತ್ತಿ ಆಫೀಸ್ ಸಮೀಪಿಸುವವರೆಗೂ ಕ್ಯಾಬ್‌ನಲ್ಲೇ ಒಂದು ಸಣ್ಣ ನಿದ್ದೆ ತೆಗೆದು ಕ್ಯಾಬ್ ನಿಂತಿದ್ದೆ ಅವಸವಸರವಾಗಿ ಆಫೀಸ್ ಬಿಲ್ಡಿಂಗ್ ಪ್ರವೇಶಿಸಿ ತನ್ನ ದಿನನಿತ್ಯದ ಜಾಗದಲ್ಲಿ ಕುಳಿತುಕೊಂಡರೆ ಹೊರಗೆ ಕಾಲಿಡುವುದು ಮತ್ತೆ ಮನೆಗೆ ಮರಳುವಾಗಲೇ. ಸಂಸಾರ ಮತ್ತು ನೌಕರಿಯ ತಾಪತ್ರಯಗಳ ನಡುವೆಯೂ ಓದು ಬರವಣಿಗೆ ಎಂದು ಹವ್ಯಾಸಗಳನ್ನು ಮೈಗೂಡಿಸಿಕೊಂಡಿರುವ ಪ್ರೇಮಚಂದನ ನಾಲ್ಕಾರು ಪುಸ್ತಕಗಳನ್ನು ಪ್ರಕಾಶಕರೊಬ್ಬರು ಪ್ರಕಟಿಸಿದ್ದರಿಂದ ಮನೆಯ ಕಪಾಟಿನಲ್ಲಿ ಹೆಸರಾಂತ ಸಾಹಿತಿಗಳ ಪುಸ್ತಕಗಳ ಸಾಲಿನಲ್ಲಿ ತನ್ನ ಪುಸ್ತಕಗಳನ್ನು ಜೋಡಿಸಿಟ್ಟು ಆಗಾಗ ಅವುಗಳ ಮೈಸವರಿ ಪುಳಕಗೊಳ್ಳುತ್ತಾನೆ.

ಈ ಹತ್ತುದಿನಗಳನ್ನು ಪ್ರೇಮಚಂದ ತುಂಬ ಆತಂಕದಿಂದಲೇ ಕಳೆದ. ಕಂಪನಿಯ ಬ್ರ್ಯಾಂಚ್ ಆಫೀಸಿನಲ್ಲಿ ತನ್ನೊಂದಿಗೆ ಕೆಲಸ ಮಾಡುತ್ತಿರುವ ಸಹೋದ್ಯೋಗಿಗಳು ಈ ಮೊದಲಿನಂತೆ ಸ್ನೇಹದಿಂದ ವರ್ತಿಸುತ್ತಿಲ್ಲ ಎನ್ನುವ ಗುಮಾನಿ ಮನಸ್ಸಿನಲ್ಲಿ ಮೂಡಿದ್ದೆ ಪ್ರೇಮಚಂದ ಮತ್ತಷ್ಟು ದಿಗಿಲುಗೊಂಡ. ಅಲ್ಲಲ್ಲಿ ಇಬ್ಬಿಬ್ಬರೆ ಜೊತೆಯಾಗಿ ನಿಂತು ಮೇಲುಧ್ವನಿಯಲ್ಲಿ ಮಾತನಾಡುವುದು, ಯಾರಾದರೂ ಬರುತ್ತಿರುವ ಸೂಚನೆ ಸಿಕ್ಕಿದ್ದೆ ಮಾತು ನಿಲ್ಲಿಸಿ ಅವರತ್ತ ಅನುಮಾನದಿಂದ ನೋಡುವುದು, ಕೆಲಸದಲ್ಲಿ ಆಸಕ್ತಿಯನ್ನೆ ಕಳೆದುಕೊಂಡ ಕಳಾಹೀನ ಮುಖಗಳು. ನಾಳೆ ಏನಾಗುವುದೋ ಎನ್ನುವ ಆತಂಕದಿಂದಾಗಿ ಆಫೀಸಿನ ವಾತಾವರಣದಲ್ಲಿ ಈ ಮೊದಲಿನ ಲವಲವಿಕೆ ಇಲ್ಲದೆ ಎಲ್ಲವೂ ಅಯೋಮಯ ಅಗೋಚರ ಅನಿಸತೊಡಗಿತು. ಸಂದರ್ಶನದ ದಿನ ಹತ್ತಿರವಾಗುತ್ತಿದ್ದಂತೆ ಪ್ರೇಮಚಂದನ ಆತಂಕ ಮತ್ತು ದಿಗಿಲು ಉಲ್ಬಣಗೊಂಡು ಬೆಡ್ ರೂಮಿನಲ್ಲಿದ್ದ ಅಲ್ಮೆರಾಕ್ಕೆ ಅಂಟಿಸಿದ ಆಳೆತ್ತರದ ಕನ್ನಡಿ ಎದುರು ನಿಂತು ತನ್ನ ಪ್ರತಿಬಿಂಬದ ಜೊತೆ ಗಂಟೆಗಟ್ಟಲೆ ಸ್ವಗತದಲ್ಲಿ ಮಾತನಾಡತೊಡಗಿದ. ಗಂಡನ ವರ್ತನೆ ಹೆಂಡತಿ



